# ಐಬು ಎತ್ತಿತೋರಿದ ಐನ್!

ಟಿಕ್‌ಟಾಕ್‌ನ ಆ ವಿಡಿಯೊ ವೈರಲ್ ಆಗುವವರೆಗೆ ಈ ಹುಡುಗಿಯ ಹೆಸರನ್ನು ಅವಳ ಶಾಲೆಯಲ್ಲೇ ಎಲ್ಲರೂ ಕೇಳಿರಲಿಲ್ಲ. ಆದರೆ, ಮಲೇಷ್ಯದ ಎಲ್ಲ ಶಾಲೆಗಳ ವಿದ್ಯಾರ್ಥಿನಿಯರ ಪಾಲಿಗೆ ಅವಳೀಗ ನಾಯಕಿ! ಈ ಹದಿಹರೆಯದ ಹುಡುಗಿಯ ಹೆಸರು ಐನ್ ಹಸ್ನಿಜಾ ಸೈಫುಲ್ ನಿಜಾಂ. ತನ್ನ ದೇಶದ ಶಾಲೆಗಳಲ್ಲಿ ನಡೆಯುತ್ತಿರುವ ಎಲ್ಲ ವಿಧದ ಕಿರುಕುಳದ ವಿರುದ್ಧ ದೊಡ್ಡದಾಗಿ ಧ್ವನಿ ಎತ್ತಿದಾಕೆ.

ಐನ್‌ಳ ಶಾಲೆಯ ಶಿಕ್ಷಕನೊಬ್ಬ ಅತ್ಯಾಚಾರದ ವಿಷಯವಾಗಿ ಕ್ಲಾಸ್‌ರೂಮ್‌ನಲ್ಲಿ ಲಘುವಾಗಿ ಮಾತನಾಡುತ್ತಾ ಲೇವಡಿ ಮಾಡಿದ್ದರಿಂದ ಸಿಡಿದೆದ್ದ ಆಕೆ, ಕನ್ನಡಿಮುಂದೆ ನಿಂತುಕೊಂಡು ತನ್ನ ಪ್ರತಿಭಟನೆಯ ಸಂದೇಶವನ್ನು ವಿಡಿಯೊ ರೆಕಾರ್ಡ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಳು. ಆ ವಿಡಿಯೊ ತುಣುಕು ದೇಶದಾದ್ಯಂತ ಕ್ಷಿಪ್ರಗತಿಯಲ್ಲಿ 18 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ 'ಶೇರ್' ಆಗಿ, ಅದೇ ಬಗೆಯ ಕಿರುಕುಳ ಅನುಭವಿಸಿದ ಸಾವಿರಾರು ವಿದ್ಯಾರ್ಥಿನಿಯರು ಐನ್‌ಗೆ ಬೆಂಬಲ ಸೂಚಿಸಿದರು. ತಮ್ಮ ಹೋರಾಟಕ್ಕೆ ಅವಳನ್ನೇ ನಾಯಕಿಯಾಗಿಯೂ ಮಾಡಿಕೊಂಡರು.



ಐನ್‌ಳ ಆಂದೋಲನಕ್ಕೆ ಪ್ರತಿಯಾಗಿ ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರದ ಹುಯಿಲನ್ನು ಎಬ್ಬಿಸಲಾಯಿತು. ಅತ್ಯಾಚಾರದ ಬೆದರಿಕೆಗಳೂ ಆಕೆಗೆ ಬಂದವು. ಶಾಲೆಯಿಂದ ಹೊರದಬ್ಬುವ ಎಚ್ಚರಿಕೆ ಸಂದೇಶ ಕೂಡ ಬಂತು. ಆದರೆ, ಯಾವುದಕ್ಕೂ ಬಗ್ಗದ ಆ ಹುಡುಗಿ #MakeSchoolASaferPlace ಆಂದೋಲನವನ್ನು ಶುರುಮಾಡಿಯೇ ಬಿಟ್ಟಳು.

'ಶಾಲೆಗಳನ್ನು ಸುರಕ್ಷಿತ ತಾಣಗಳನ್ನಾಗಿಸಬೇಕು ಎಂದು ನಾನು ಧ್ವನಿ ಎತ್ತಿದಾಗ ಎಷ್ಟೊಂದು ಜನ ನನ್ನನ್ನು ದ್ವೇಷಿಸಿದರು. ತಿರಸ್ಕಾರದಿಂದ ನೋಡಿದರು. ಏಕೆಂದು ಇನ್ನೂ ತಿಳಿಯುತ್ತಿಲ್ಲ' ಎಂದು ಆಕೆ ಹೇಳುತ್ತಾಳೆ. 'ಶಾಲೆಗಳನ್ನು ಸುರಕ್ಷಿತ ತಾಣಗಳನ್ನಾಗಿ ಮಾಡಬೇಕೆಂಬ ಬೇಡಿಕೆಯಲ್ಲಿ ಚರ್ಚಿಸುವಂತಹದ್ದು ಏನಿದೆ? ಸಮಾಜದ ಒಳಿತಿನ ಕುರಿತು ಯೋಚಿಸುವ ಎಲ್ಲರ ಬೇಡಿಕೆಯೂ ಇದಲ್ಲವೇ' ಎಂದು ಐನ್ ಕೇಳುತ್ತಾಳೆ.

ಮಲೇಷ್ಯದ ಶಾಲೆಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯಗಳು ನಡೆಯುತ್ತಲೇ ಇವೆ ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತರು ಬಹುದಿನಗಳಿಂದಲೂ ದೂರುತ್ತಲೇ ಬಂದಿದ್ದಾರೆ. ಐನ್‌ಳ ಆಂದೋಲನ ಆ ದೂರನ್ನು ಪುಷ್ಟೀಕರಿಸಿದೆ. 'ಶಾಲೆಗಳಲ್ಲಿ ಈ ದೌರ್ಜನ್ಯ ಹೀಗೇ ಮುಂದುವರಿಯಲು ನಾವು ಬಿಡುವುದಿಲ್ಲ' ಎಂದೆನ್ನುವ ಆಕೆ, ಉಳಿದ ವಿದ್ಯಾರ್ಥಿನಿಯರಿಗೆ ಗಟ್ಟಿಗಿತ್ತಿಯಾಗಿ ಕಾಣುತ್ತಾಳೆ.

'ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದರೆ ಅವರನ್ನು ರಕ್ಷಿಸಲು ಕಠಿಣ ಕಾನೂನುಗಳಿವೆ. ಯಾವುದಾದರೂ ಹುಡುಗ ಅತ್ಯಾಚಾರ ಮಾಡಬಯಸಿದರೆ 18 ವರ್ಷಕ್ಕಿಂತ ಹೆಚ್ಚಿನ ವಯೋಮಾನದ ಯುವತಿಯರನ್ನೇ ಹುಡುಕಬೇಕು' ಎಂದು ಐನ್‌ಳ ಶಿಕ್ಷಕ ಕ್ಲಾಸ್‌ನಲ್ಲಿ ಹೇಳಿದ್ದ. ಆ ಘಟನೆಯನ್ನು ಎಳೆ ಎಳೆಯಾಗಿ ವಿವರಿಸಿದ ಈ ಹುಡುಗಿ, 'ಹೌದು, ಆ ಶಿಕ್ಷಕ ನಿಜವಾಗಿ ಹೀಗೆ ಹೇಳಿದ. ಆತನ ಮಾತು ಕೇಳಿ ಕ್ಲಾಸ್‌ನಲ್ಲಿದ್ದ ಹುಡುಗರು ನಕ್ಕರು. ಅದನ್ನು ಅವರು ತಮಾಷೆಯಾಗಿ ತೆಗೆದುಕೊಂಡರು' ಎಂದು ಆಕ್ರೋಶದಿಂದ ಹೇಳುತ್ತಾಳೆ.

ಐನ್‌ಳ ವಿಡಿಯೊ ನೋಡಿದ ದೇಶದ ಇತರ ಶಾಲೆಗಳ ಹುಡುಗಿಯರೂ ತಾವು ಅನುಭವಿಸಿದ ತೊಂದರೆಯ ಕುರಿತು ವಿಡಿಯೊ ಮಾಡಿ ಹಾಕತೊಡಗಿದರು. ಮಲೇಷ್ಯದ ಎಲ್ಲ ಭಾಗಗಳಲ್ಲೂ ಇಂತಹ ದೌರ್ಜನ್ಯ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೂ ಬಂತು. 'ಇದು ಒಬ್ಬ ಶಿಕ್ಷಕನ ಸಮಸ್ಯೆ ಅಲ್ಲ. ಇಡೀ ಶಿಕ್ಷಣ ವ್ಯವಸ್ಥೆಯ ಸಮಸ್ಯೆ ಎನ್ನುವುದು ನಮ್ಮ ಆಂದೋಲನದಿಂದ ಸರ್ಕಾರದ ಗಮನಕ್ಕೆ ಬಂದಿದೆ. ಸಮಸ್ಯೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆಯಾಗಿದೆ' ಎಂದು ಆಕೆ ವಿವರಿಸುತ್ತಾಳೆ.

ಹುಡುಗಿಯರು –ವಿಶೇಷವಾಗಿ ಮುಸ್ಲಿಂ ಹುಡುಗಿಯರು– ಮುಟ್ಟಾಗಿದ್ದಾರೆಯೇ ಎಂದು 'ಪಿರಿಯಡ್ ಸ್ಪಾಟ್ ಚೆಕ್' ಮಾಡುವ ಪರಿಪಾಟವೂ ಹಲವು ಶಾಲೆಗಳಲ್ಲಿದೆ ಎಂದು ಮಲೇಷ್ಯದ ನಾಗರಿಕ ಸಂಘಟನೆಗಳು ದೂರುತ್ತಲೇ ಇವೆ. ವಿದ್ಯಾರ್ಥಿನಿಯರ ಮೇಲೆ ನಡೆಯುವ ದೈಹಿಕ ಹಾಗೂ ಮಾನಸಿಕ ದೌರ್ಜನ್ಯದ ಕುರಿತೂ ಅಲ್ಲಿ ವ್ಯಾಪಕವಾಗಿ ದೂರುಗಳು ಕೇಳಿ ಬರುತ್ತಿವೆ. ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ವಿದ್ಯಾರ್ಥಿನಿಯರು ಮುಟ್ಟಿನ ಸಂದರ್ಭದಲ್ಲಿ ಶಾಲಾ ಪ್ರಾರ್ಥನೆಗಳಲ್ಲಿ ಪಾಲ್ಗೊಳ್ಳುವಂತಿಲ್ಲ. ಈ ನಿಯಮವನ್ನೇ ದುರುಪಯೋಗ ಮಾಡಿಕೊಂಡು ದೌರ್ಜನ್ಯ ಎಸಗಲಾಗುತ್ತಿದೆ ಎಂದು ದೂರಲಾಗುತ್ತಿದೆ.

ಕ್ವಾಲಾಲಂಪುರದ ಹತ್ತಿರದಲ್ಲಿರುವ ಪುಂಕಾಕ್ ಅಲಂ ಎಂಬಲ್ಲಿ ಐನ್‌ಳ ಶಾಲೆ ಇದೆ. ಆಕೆ ಈಗ ಶಾಲೆಗೆ ಹೋಗುತ್ತಿಲ್ಲ. ಏಕೆಂದರೆ, ಅವಳಿಗೆ ಜೀವ ಬೆದರಿಕೆ ಇದೆ. ಅಲ್ಲದೆ, ಶಾಲೆಯಿಂದ ಹೊರದಬ್ಬುವ ಎಚ್ಚರಿಕೆ ಕೂಡ ಬಂದಿದೆ. ಸಾಮಾಜಿಕ ಜಾಲತಾಣದಲ್ಲಿ ಒತ್ತಡ ಹೆಚ್ಚಾಗುತ್ತಿದ್ದಂತೆ ಅಲ್ಲಿನ ಶಿಕ್ಷಣ ಇಲಾಖೆ ಆ ಶಿಕ್ಷಕನನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡಿದೆ. ಶಾಲೆಯಲ್ಲಿ ಎಲ್ಲ ಮಕ್ಕಳ ಸುರಕ್ಷತೆಗೆ ಒತ್ತು ನೀಡಲಾಗುವುದು ಎಂದೂ ಪ್ರಕಟಿಸಿದೆ. ಮುಂದಿನ ಹೆಜ್ಜೆ ಏನು ಎಂದು ವಿದ್ಯಾರ್ಥಿನಿಯರು ಕಾತರದಿಂದ ಎದುರು ನೋಡುತ್ತಿದ್ದಾರೆ.

'ನಾವಂತೂ ಅನುಭವಿಸಿದ ತೊಂದರೆಯನ್ನು ಮುಕ್ತವಾಗಿ ಹೇಳಿದ್ದೇವೆ. ಉಳಿದ ವಿದ್ಯಾರ್ಥಿನಿಯರೂ ಹೇಳುತ್ತಿದ್ದಾರೆ. ಈಗ ಆ ತೊಂದರೆಯನ್ನು ಹೋಗಲಾಡಿಸುವ ಹೊಣೆ ನಮ್ಮ ಹಿರಿಯರ ಮೇಲಿದೆ' ಎನ್ನುತ್ತಾಳೆ ಐನ್. ಭಾರತದಲ್ಲಿ ಮೌನವಾಗಿ ನೋವು ಅನುಭವಿಸುತ್ತಿರುವ ಸಂತ್ರಸ್ತರೂ ಅವರ ರಕ್ಷಣೆಯ ಹೊಣೆಹೊತ್ತ ಪಾಲಕರೂ ಐನ್‌ಳ ಈ ಮಾತನ್ನು ಕೇಳಿಸಿಕೊಂಡಾರೆಯೇ?

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65